# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಸಹಾಯಕ ಕಾರ್ಯಪಾಲಕ ಅಭಿಯಂತರರ ಕಛೇರಿ, ಹೂಡಿ ಉಪವಿಭಾಗ, ಬೆಂಗಳೂರು-48.**

ಸಂ:ಬಿಬಿಎಂಪಿ/ಸಕಾಅ/ಹೂಉವಿ/47/2022-23 ದಿನಾಂಕ:21.05.2022

**-:ದಿನಾಂಕ:21.05.2022 ರಂದು ನಡೆದ 54-ಹೂಡಿ ವಾರ್ಡ್ ಸಮಿತಿಯ ಸಭೆಯ ನಡುವಳಿಗಳು:-**

ಮಾನ್ಯ ಆಯುಕ್ತರವರ ಆದೇಶದ ದಿನಾಂಕ:21-09-2020ರ ಮೇರೆಗೆ ವಾರ್ಡ್ ಸಮಿತಿಯನ್ನು ರಚಿಸಲಾಗಿದ್ದು, ದಿನಾಂಕ:21.05.2022 ರ ಶನಿವಾರ ಮಧ್ಯಾಹ್ನ 3.00 ಕ್ಕೆ ವಾರ್ಡ್ ನಂ.54-ಹೂಡಿ ವಾರ್ಡ್ ಮಟ್ಟದ ಸಮಿತಿಯ ಸಭೆಯನ್ನು ನೋಡಲ್ ಅಧಿಕಾರಿಗಳ ಅಧ್ಯಕ್ಷತೆಯಲ್ಲಿ ನಡೆಸಲಾಯಿತು. ಸಭೆಯ ಅಧ್ಯಕ್ಷರಾದ ನೋಡಲ್ ಅಧಿಕಾರಿಗಳೂ ಸಭೆಯನ್ನು ಪ್ರಾರಂಭಿಸಿ ಉಪಸ್ಥಿತರಿದ್ದ ಎಲ್ಲಾ ಅಧಿಕಾರಿಗಳಿಗೂ ಹಾಗೂ ಸ್ಥಳೀಯ ಸಂಘ ಸಂಸ್ಥೆಯವರಿಗೆ ಸ್ವಾಗತ ಕೋರಿದ್ದು, ಸಭೆಯನ್ನು ಪ್ರಾರಂಭಿಸಿದರು.

**ಸಭೆಗೆ ಹಾಜರಿದ್ದವರು:-**

| ಕ್ರ.ಸಂ | ಹಾಜರಿದ್ದವರ ಹೆಸರು | ಪದನಾಮ ಅಥವಾ ಇಲಾಖೆ | ಹಾಜರಾತಿ |
|---|---|---|---|
| 1. | ಶ್ರೀ.ಕುಬೇರಪ್ಪ. ಕೆ | ಅಧ್ಯಕ್ಷರು ವಾರ್ಡ್ ನೋಡಲ್ ಅಧಿಕಾರಿಗಳು ಹಾಗೂ ಸ.ಕಾ.ಅ. ಹೂಡಿ ಉಪವಿಭಾಗ | ಹಾಜರಿದ್ದರು. |
| 2. | ಶ್ರೀ.ಶೇಖ್ ಮೊಹಿದ್ದೀನ್ | ಕಾರ್ಯದರ್ಶಿಗಳು ವಾರ್ಡ್ ಎ.ಇ. ವಾರ್ಡ್.ನಂ-54 | ಹಾಜರಿದ್ದರು. |
| 3 | ಶ್ರೀ.ನಾಗರಾಜ.ವಿ | ಹಿರಿಯ ಆರೋಗ್ಯ ಪರಿವೀಕ್ಷಕರು, | ಹಾಜರಿದ್ದರು. |
| 4 | ಶ್ರೀ.ಚಂದ್ರಪ್ಪ | ಕಿರಿಯ ಆರೋಗ್ಯ ನೀರಿಕ್ಷಕರು ಭೈರತಿ ಹೂಡಿ-54 | ಹಾಜರಿದ್ದರು. |
| 5 | ಶ್ರೀ.ಗೀರಿಶ್‌ಕುಮಾರ್ ನಾಯ್ಡು | ಅಯ್ಯಪ್ಪನಗರ | ಹಾಜರಿದ್ದರು. |
| 6 | ಶ್ರೀ.ಸತೀಶ್ ಕುಮಾರ್.ಎಂ.ಆರ್ | ಬಿಡಬ್ಲ್ಯೂಎಸ್‌ಎಸ್ ಬಿ, | ಹಾಜರಿದ್ದರು. |
| 7 | ಶ್ರೀ.ಮಹೇಂದ್ರ ಪ್ರಸಾದ್ | ಕೊಡಿಗೇಹಳ್ಳಿ | ಹಾಜರಿದ್ದರು. |
| 8 | ಶ್ರೀ.ನಾಗರಾಜ್ | ಬೆಸ್ಕಾಂ ಜೆಇ | ಹಾಜರಿದ್ದರು. |
| 9 | ಶ್ರೀಮತಿ.ನರಸಮ್ಮ (ನಳಿನಿ) | SWM Sup. | ಹಾಜರಿದ್ದರು. |
| 10 | ಕೆಂಪರಾಜ್ ಎ | ಬಿಳಿಶೀವಾಲೆ | ಹಾಜರಿದ್ದರು. |
| 11 | ಆರೋಗ್ಯ ಸ್ವಾಮಿ | ಆರ್.ಡಬ್ಲ್ಯೂ.ಎ. | ಹಾಜರಿದ್ದರು. |
| 12 | ಎಂ.ವೆಂಕಟೇಶ್ | ಸಾರ್ವಜನಿಕರು | ಹಾಜರಿದ್ದರು. |
| 13 | ಶ್ರೀಮತಿ. ಅರುಣಾರೆಡ್ಡಿ | ಆರ್.ಡಬ್ಲ್ಯೂ.ಎ. | ಹಾಜರಿದ್ದರು. |
| 14 | ರಮೇಶ್‌ಬಾಬು | ಆರ್.ಡಬ್ಲ್ಯೂ.ಎ. | ಹಾಜರಿದ್ದರು. |
| 15 | ರಿತೀಶ್ | ಸಾರ್ವಜನಿಕರು | ಹಾಜರಿದ್ದರು. |

Scanned with CamScanner

**ಸಭೆಯ ನಡುವಳಿಗಳು:-**

- ವಾರ್ಡ್ ಸಮಿತಿ ಕಾರ್ಯದರ್ಶಿ ಹಾಗೂ ಸಹಾಯಕ ಅಭಿಯಂತರರು ವಾರ್ಡ್ ನಂ–54 ರವರು ಸಭೆಗೆ ಬಂದಿರುವ ವಾರ್ಡ್ ಸದಸ್ಯರಿಗೆ, ಅಧಿಕಾರಿ/ನೌಕರರುಗಳಿಗೆ ಸ್ವಾಗತಾ ಕೋರಿಸಭೆ ನಡೆಸಿಕೊಡುವಂತೆ ಕೊರಿದರು.
- ಅಧ್ಯಕ್ಷರು ಈ ಹಿಂದೆ ನಡೆದ ವಾರ್ಡ್ ಸಮಿತಿ ಸಭೆಯಲ್ಲಿ ತಿರ್ಮಾನಗಳನ್ನು ಕೈಗೊಂಡಿರುವ ಬಗ್ಗೆ ಅಧಿಕಾರಿ/ನೌಕರರು ಚರ್ಚಿಸಲಾಯಿತ್ತು ಹಾಗೂ ಕ್ರಮವಹಿಸಲು ಸೂಚಿಸಲಾಯಿತ್ತು.
- ಸಭೆಗೆ ಹಾಜರಾಗದ ಅಧಿಕಾರಿಗಳಿಗೆ ಮುಂದಿನ ಸಭೆಗಳಿಗೆ ತಪ್ಪದೇ ಹಾಜರಾಗಲು ಸೂಚಿಸಲಾಯಿತು ಹಾಗೂ ಮುಂದಿನ ಸಭೆಯಲ್ಲಿ ಗೈರುಹಾಜರಾದಲ್ಲಿ ಮೇಲಾಧಿಕಾರಿಗಳಿಗೆ ಶಿಫಾರಸ್ಸು ಮಾಡಲಾಗುವುದು ಎಂದು ತಿಳಿಸಿದರು.

**I.ಘನತ್ಯಾಜ್ಯ ನಿರ್ವಹಣೆಯ ಬಗ್ಗೆ:-**

1) ಕೆಂಪರಾಜ್ ಆರ್.ಡಬ್ಲ್ಯೂ.ಎ. ರವರು ಬಿಳೆಶಿವಾಲೆ, ಶ್ರೀ ಆಂಜಿನೇಯ ಸ್ವಾಮಿ ದೇವಸ್ಥಾನದ ಹತ್ತಿರ ಪ್ರತಿ ಶನಿವಾರ ನಡೆಯುವ ಅನ್ನಸಂತರ್ಪಣೆಯ ನಂತರ ಬರುವ ಪ್ಲೇಟ್, ಗ್ಲಾಸ್, ತ್ಯಾಜ್ಯವನ್ನು ಸಂಗ್ರಹಿಸಿ ತೆರವುಗೊಳಿಸಿಸಲು ಕೊರಿದರು.
2) ಅಧ್ಯಕ್ಷರ ಪರವಾಗಿ ಚಂದ್ರಪ್ಪ ಕಿ.ಆ.ಪ ರವರು ಮುಂದಿನ ದಿನಗಳಲ್ಲಿ ಸರಿಯಾದ ರೀತಿಯಲ್ಲಿ ಹಸಿ ತ್ಯಾಜ್ಯವಾಗಿರುವುದರಿಂದ ನಾವು ನಮ್ಮ ಆಟೋ ಟಿಪ್ಪರ್ ಮುಂಖಾಂತರ ಸಮರ್ಪಕವಾಗಿ ನಿರ್ವಹಿಸುವುದಾಗಿ ತಿಳಿಸಿದರು ಹಾಗೂ ಪೌರಕಾರ್ಮಿಕರಿಗೆ ಒಂದು ರೆಸ್ಟ್‌ರೂಂ ಬೇಕೆಂದು ಕೇಳಿದ್ದರು. ಅದರಂತೆ ಮಾಡುವುದಾಗಿ ತಿಳಿಸಿದರು
3) ಗಿರೀಶ್ ಕುಮಾರ್ ನಾಯ್ಡು ಆರ್.ಡಬ್ಲ್ಯೂ.ಎ. ಅಯ್ಯಪ್ಪನಗರ ರವರು ಒಣತ್ಯಾಜ್ಯ ಸಮರ್ಪಕವಾಗಿರುವುದಿಲ್ಲ ಎಂದು ತಿಳಿಸಿದರು.
4) ಅಧ್ಯಕ್ಷರು ಮುಂದಿನ ದಿನಗಳಲ್ಲಿ ಸಮರ್ಪಕವಾಗಿ ನಿರ್ಮಿಸಲು ಒಣತ್ಯಾಜ್ಯ ಸಂಗ್ರಹಕರಿಗೆ ತಿಳಿಸಿದರು.
5) ಪ್ರಸಾದ್ ಆರ್.ಡಬ್ಲ್ಯೂ.ಎ. ರವರು ತ್ಯಾಜ್ಯ ಸಂಗ್ರಹಿಸುವ ವಾಹನಗಳ ಡ್ರೈವರ್‌ಗಳಿಗೆ ಡಿ.ಎಲ್ ಇರುವವರಿಗೆ ಮಾತ್ರ ಅವಕಾಶ ಮಾಡಲು ತಿಳಿಸಿದರು ಹಾಗೂ ಕೊಡಿಗೇಹಳ್ಳಿಯಲ್ಲಿ ಪ್ರಶಾಂತ್ ಲೇಔಟ್‌ನಲ್ಲಿ ಆಟೋಗಳನ್ನು ನಿಲ್ಲಿಸಲು ಬರುವ ವೇಳೆ ಆಟೋಗಳು ತುಂಬಾ ಸ್ಪೀಡ್ ಆಗಿ ವಾಹನಗಳನ್ನು ಚಲಾಯಿಸುತ್ತಾರೆ ಅವರಿಗೆ ಸೂಕ್ತ ನಿರ್ದೇಶನ ನೀಡಲು ತಿಳಿಸಿದರು.
6) ಅಧ್ಯಕ್ಷರು ಈ ವಿಚಾರವಾಗಿ ಮುಂದಿನ ದಿನಗಳಲ್ಲಿ ಪ್ರತಿಯೊಬ್ಬ ಹಿ.ಆ.ಪ ರವರು ಪ್ರತಿಯೊಬ್ಬರ ಡಿ,ಎಲ್. ಪರಿಶೀಲಿಸಿ ಚಾಲಕರಿಗೆ ಆಟೋಚಾಲನೆ ಮಾಡಲು ತಿಳಿಸಿದರು.

**ಕ್ರಂ.ಸಂ 1 ಮತ್ತು 6ರ ವರೆಗಿನ ದೂರುಗಳ ಬಗ್ಗೆ ಪರಿಶೀಲಿಸಿ ಒಂದುವಾರದೊಳಗಾಗಿ ಕೈಗೊಂಡ ಕ್ರಮಗಳಿಗೆ ಮುಂದಿನ ಸಭೆಗೆ ವರದಿಯೊಂದಿಗೆ ತಿಳಿಸಲಾಯಿತ್ತು.**
**(ಕ್ರಮ:- ಎಸ್.ಡಬ್ಲ್ಯೂ.ಎಂ/ಹಿ.ಆ.ಪ/ಕಿ.ಆ.ಪ)**

Scanned with CamScanner

**ಬಿ.ಡಬ್ಲ್ಯೂ.ಎಸ್,ಎಸ್.ಬಿ(BWSSB):-**

1) ಗಿರೀಶ್‌ಕುಮಾರ್ ನಾಯ್ಡು ರವರು ಅಯ್ಯಪ್ಪನಗರ ವ್ಯಾಪ್ತಿಯಲ್ಲಿ ಅನಧಿಕೃತವಾಗಿ ಕನೆಕ್ಷನ್ ಪಡೆದಿರುತ್ತಾರೆ ಅದನ್ನು ಸರಿಪಡಿಸಲು ತಿಳಿಸಿದರು.
2) ಅಧ್ಯಕ್ಷರು ಈಗಾಗಲೇ ಅನಧಿಕೃತವಾಗಿ ಪಡೆದಿರುವ ಕನೆಕ್ಷನ್‌ಗಳನ್ನು ತೆರವುಗೊಳಿಸಿದ್ದು ಇನ್ನೂ ಕೆಲವು ಇರುವ ಕನೆಕ್ಷನ್‌ಗಳನ್ನು ಮುಂದಿನ ದಿನಗಳಲ್ಲಿ ತೆರವುಗೊಳಿಸಲು ಸೂಚಿಸಿದರು ಈಗಾಗಲೆ ನೋಟಿಸ್ ನೀಡಿದ್ದು ನೋಟಿಸ್‌ಗಳನ್ನು ಮುಂದಿನ ಸಭೆಗೆ ನೀಡಲು ಅಧ್ಯಕ್ಷರು ತಿಳಿಸಿದರು. ಅದರಂತೆ ಬಿ.ಡಬ್ಲ್ಯೂ.ಎಸ್,ಎಸ್.ಬಿ ರವರು ನೀಡುವುದಾಗಿ ತಿಳಿಸಿದರು.
3) ನಳಿನಿ ರಾಜ್‌ಪಾಳ್ಯ ರವರು ವಾರದಲ್ಲಿ 2 ಬಾರಿ ನೀರು ಬರುತ್ತಿದ್ದು ಬೆಳಗಿನ ಜಾವ 4 ಗಂಟೆಗೆ ನೀರು ಬರುತ್ತಿದ್ದು ಇಲ್ಲಿ ಹಲವರಿಗೆ ಗೊತ್ತಾಗುವುದಿಲ್ಲ ಇದಕ್ಕೆ ಗೊತ್ತಾಗುವಂತೆ ವಾಟರ್‌ಮ್ಯಾನ್ ರವರಿಗೆ ತಿಳಿಸಿದರು.
4) ಗಿರೀಶ್ ಕುಮಾರ್ ನಾಯ್ಡ್ ರವರು ಸತೀಶ್ ಹಾಗೂ ಮಂಜುನಾಥ ರವರು ಮನೆಗಳಿಂದ ಹಣ ವಸೂಲಿ ಮಾಡಿರುತ್ತಾರೆಂದು ತಿಳಿಸಿದರು. ಹಾಗೂ ಬಿ.ಡಬ್ಲ್ಯೂ.ಎಸ್,ಎಸ್.ಬಿ. ಎಇ ರವರಿಗೆ ವಾಟ್ಸಪ್ ಗ್ರೂಪ್‌ಗೆ ಹಲವು ನಂಬರ್‌ಗಳನ್ನು ನೀಡುವುದಾಗಿ ಸೂಚಿಸಿದರು ಅದನ್ನು ಗ್ರೂಪ್‌ಗೆ Add ಮಾಡಲು ತಿಳಿಸಿದರು.
5) ಆರೋಗ್ಯಸ್ವಾಮಿ ಆರ್.ಡಬ್ಲ್ಯೂ.ಎ. ರವರು ನೀರಿಗೆ ಸಂಬಂಧಿಸಿದಂತೆ ಬೋರ್‌ವೆಲ್ ರಿಪೇರಿ ಯಾಗುತ್ತಿರುತ್ತದೆ ಅದನ್ನು ಸರಿಪಡಿಸಲು ತಿಳಿಸಿದರು ಹಾಗೂ ಒಂದು ಬೋರ್‌ವೆಲ್ ಕೊರೆಸಲು ತಿಳಿಸಿದರು. ಹಾಗೂ ಆರೋಗ್ಯಸ್ವಾಮಿ ರವರು ವಾಟರ್ ಲೀಕೆಜ್ ಇದ್ದು ಸರಿಪಡಿಸಲು ತಿಳಿಸಿದರು. 5ನೇಕ್ರಾಸ್, 7ನೇ ಕ್ರಾಸ್ ಮತ್ತು 11ನೇ ಕ್ರಾಸ್ ಮುಂದೆ ಈ ಭಾಗಗಳಲ್ಲಿ ವಾಟರ್ ಲೀಕೆಜ್ ಇದ್ದು ಪರಿಪಡಿಸಲು ತಿಳಿಸಿದರು. ಇನ್ನೂ ಮುಂದೆ ಪ್ರತಿ ಸಭೆಗಳ Prossidings ನ್ನು Hoodi ward Commniting Watsapp ಗ್ರೂಪ್‌ನಲ್ಲಿ ಪ್ರಚಾರ ಪಡಿಸಲು ತಿಳಿಸಿದರು.
6) ಬಾಬು ರವರು ಸಾಕೇತ್‌ನಗರ ಬಡಾವಣೆಗಲ್ಲಿ ಮಳೆಬಂದು ಛೆಂಬರ್‌ಗಳು ಉಕ್ಕಿ ಹರಿಯುತ್ತಿರುವ ವೇಳೆ ಸರಿಪಡಿಸಲು ತಿಳಿಸಿದರು.
7) ಅಧ್ಯಕ್ಷರು ಹೂಡಿ ವಾಡ ವ್ಯಾಪ್ತಿಯಲ್ಲಿ ತೆರದ ಚರಂಡಿಗೆ ಬಿಟ್ಟಿರುವ Sewage ತ್ಯಾಜ್ಯ ನೀರನ್ನು ಸ್ಥಳ ಪರಿಶೀಲಿಸಿ ಸೂಕ್ತ ಕ್ರಮ ಕೈಗೊಳ್ಳಲು ಬಿ.ಡಬ್ಲ್ಯೂ.ಎಸ್,ಎಸ್.ಬಿ, ಎಇ ರವರಿಗೆ ತಿಳಿಸಿದರು.

**ಕ್ರಂ.ಸಂ 1ರಿಂದ 7 ರ ವರೆಗಿನ ದೂರುಗಳ ಬಗ್ಗೆ ಪರಿಶೀಲಿಸಿ ಒಂದುವಾರದೊಳಗಾಗಿ ಕೈಗೊಂಡ ಕ್ರಮಗಳಿಗೆ ಮುಂದಿನ ಸಭೆಗೆ ವರದಿಯೊಂದಿಗೆ ತಿಳಿಸಲಾಯಿತ್ತು.**
**(ಕ್ರಮ:- ಸ.ಕಾ.ಅ./ಸ.ಅ/ಬಿ.ಡಬ್ಲ್ಯೂ.ಎಸ್,ಎಸ್.ಬಿ).**

**ಬೀದಿ ದೀಪ ಹಾಗೂ ಬೆಸ್ಕಾಂ**

1) ಗೀರಿಶ್ ಕುಮಾರ್ ನಾಯ್ಡು ರವರು ಅನಧಿಕೃತವಾಗಿರುವ ಕನೆಕ್ಷನ್‌ಗಳನ್ನು ಕಡಿತಗೊಳಿಸಲು ತಿಳಿಸಿದರು.
2) ಎಇ ಬೆಸ್ಕಾಂ ರವರು ಆಲ್ಫಾಗಾರ್ಡನ್ ಹಾಗೂ ಕೋಕೊನೇಟ್ ಗಾರ್ಡನ್‌ನಲ್ಲಿನ ಕೆಲವು ಬಿಲ್ಡಿಂಗ್‌ಗಳಿಗೆ ನೋಟಿಸ್ ನೀಡಿರುವುದಾಗಿ ಸಭೆಯಲ್ಲಿ ತಿಳಿಸಿದರು.
3) ಗಿರೀಶ್‌ಕುಮಾರ್ ನಾಯ್ಡು ರವರು ಅಯ್ಯಪ್ಪನಗರ ವ್ಯಾಪ್ತಿಯ ಗುರುಸಾಗರ್ ಹೋಟಲ್ ಎದುರುಗಡೆ ಇರುವ ಟಿಸಿಯಲ್ಲಿ ಬೆಂಕಿ ಕಾಣಿಸಿಕೊಳ್ಳುತ್ತಿದ್ದು ಸರಿಪಡಿಸಲು ತಿಳಿಸಿದರು.
4) ಅಧ್ಯಕ್ಷರು ಹಲವು ಕಡೆ ಕೇಬಲ್‌ಗಳನ್ನು ಹಾಕಿರುವ ಕಡೆ ರಸ್ತೆ Sink ಆಗಿದ್ದು ಸರಿಪಡಿಸಲು ಎಇ ಬೆಸ್ಕಾಂ ರವರಿಗೆ ತಿಳಿಸಿದರು.

Scanned with CamScanner

5) ಪ್ರಸಾದ್ ಕೊಡಿಗೇಹಳ್ಳಿ ರವರು ಓಸಿ, ಸಿಸಿ ಇಲ್ಲಿದೆ ಅಪಾರ್ಟ್‌ಮೆಂಟ್‌ಗಳಿಗೆ ಬೆಸ್ಕಾಂ ನಿಂದ ಅನುಮತಿ ನೀಡಬಾರದೆಂದು ತಿಳಿಸಿದರು.
6) ನಳಿನಿ ಆರ್.ಡಬ್ಲ್ಯೂ.ಎ. ರವರು ಹೂಡಿ ಸೊಸೈಟಿ ಹತ್ತಿರ ರಸ್ತೆಯಲ್ಲಿ ಬೆಸ್ಕಾಂನವರು ರಸ್ತೆ ಅಗೆದಿರುವುದನ್ನು ಸರಿಯಾಗಿ ಮುಚ್ಚಿರುವುದಿಲ್ಲ ಎಂದು ತಿಳಿಸಿದರು.
7) ಪ್ರಸಾದ್ ಕೊಡಿಗೇಹಳ್ಳಿ ರವರು ಹಲವು ಚರಂಡಿಗಳಲ್ಲಿ ದಪ್ಪ ಕೇಬಲ್‌ಗಳನ್ನು ಚರಂಡಿಗಳಲ್ಲಿ ಬೆಸ್ಕಾಂ ರವರು ಅಳವಡಿಸಿದ್ದು ಅದನ್ನು ಸರಿಪಡಿಸಲು ತಿಳಿಸಿದರು.
8) ಗಿರೀಶ್ ಕುಮಾರ್ ನಾಯ್ಡು ರವರು ಹಲವು ಕಡೆ ಸಿಸಿಟಿವಿ ಗಳನ್ನು ಹಾಕಿದ್ದು ಈ ಜಾಗಗಳಲ್ಲಿ ಹೊಸ ಎಲ್‌ಇಡಿ ಲೈಟ್ ಹಾಕಲು ಮಾನ್ಯ ಡಿಸಿಪಿ ರವರಿಗೆ ಸೂಚಿಸಿಲು ತಿಳಿಸಿದರು.
9) ಪ್ರಸಾದ್ ಕೊಡಿಗೇಹಳ್ಳಿ ರವರು ಕಾಸಗ್ರಾಂಡ್ ನಿಂದ ಕೊಡಿಗೇಹಳ್ಳಿ ವರೆಗೆ ಬೀದಿದೀಪಗಳು ಉರಿಯುತ್ತಿರುವುದಿಲ್ಲ ಎಂದು ತಿಳಿಸಿದರು.
10) ಅಧ್ಯಕ್ಷರು ಅದರಂತೆ ಸಂಬಂಧಪಟ್ಟ ಅಧಿಕಾರಿಯವರಿಗೆ ಸೂಚಿಸಿದರು.

**ಕ್ರಂ.ಸಂ 1ರಿಂದ 10 ರ ವರೆಗಿನ ದೂರುಗಳ ಬಗ್ಗೆ ಪರಿಶೀಲಿಸಿ ಒಂದುವಾರದೊಳಗಾಗಿ ಕೈಗೊಂಡ ಕ್ರಮಗಳಿಗೆ ಮುಂದಿನ ಸಭೆಗೆ ವರದಿಯೊಂದಿಗೆ ತಿಳಿಸಲಾಯಿತ್ತು.**
**(ಕ್ರಮ:- ಸ.ಕಾ.ಅ./ಸ.ಅ/ಬೆಸ್ಕಾಂ)**

**ಮೇಜರ್ ರೋಡ್**

1) ಗೀರಿಶ್ ಕುಮಾರ್ ನಾಯ್ಡು ರವರು ಅಯ್ಯಪ್ಪನಗರ ಅನಧಿಕೃತ ಒತ್ತುವರಿ ಪಡೆದಿದ್ದು ಇನ್ನೂ ಕೆಲವರ ಒತ್ತುವರಿ ತೆರವುಗೊಳಿಸಿರುವುದಿಲ್ಲ ಏಕೆ ಎಂದು ತಿಳಿಸಿದರು.
2) ಮುನಿಯಪ್ಪ ಎಇಇ ರವರು ಒತ್ತುವರಿಯಾಗಿರುವ ಜಾಗಗಳನ್ನು ಸರ್ವೆಕಾರ್ಯ ಮಾಡಿಸಿ ಇದನ್ನು ತೆರವುಗೊಳಿಸುದಾಗಿ ತಿಳಿಸಿದರು.
3) ಕೆಂಪರಾಜ್ ಬಿಳೆಶಿವಾಲೆ, ಕ್ಯಾಲಸನಹಳ್ಳಿ ಮುಖ್ಯರಸ್ತೆಯಲ್ಲಿ ಹಲವು ಹೋಟೆಲ್‌ಗಳಿಂದ ನೀರನ್ನು ರಸ್ತೆಗೆ ಬಿಟ್ಟಿರುತ್ತಾರೆ ಅದನ್ನು ಸರಿಪಡಿಸಲು ತಿಳಿಸಿದರು.
4) ಆರೋಗ್ಯಸ್ವಾಮಿ ರವರು ಬಿಳೆಶಿವಾಲೆ ಯಿಂದ ಕ್ಯಾಲಸನಹಳ್ಳಿ ವರೆಗೆ ಬಿ.ಡಬ್ಲ್ಯೂ.ಎಸ್,ಎಸ್.ಬಿ ರವರು ಅಗೆದಿರುವ ಕಡೆ ರೀಸ್ಟೋರ್ ಮಾಡಿರುವುದಿಲ್ಲ ಇದನ್ನು ಸರಿಪಡಿಸಲು ತಿಳಿಸಿದರು.
5) ಮೇಜರ್ ರೋಡ್‌ಗಳಲ್ಲಿನ ಸಿಲ್ಟ್ ತೆಗೆಯಲು ತಿಳಿಸಿದರು.
6) ಆರೋಗ್ಯಸ್ವಾಮಿ ರವರು ಭೈರತಿ ಬ್ಲೇಸಿಂಗ್ ಗಾರ್ಡನ್ ರಸ್ತೆಯ ಡ್ರೈನ್ ಮಾಡಲು ತಿಳಿಸಿದರು.

**ಕ್ರಂ.ಸಂ 1ರಿಂದ 6 ರ ವರೆಗಿನ ದೂರುಗಳ ಬಗ್ಗೆ ಪರಿಶೀಲಿಸಿ ಒಂದುವಾರದೊಳಗಾಗಿ ಕೈಗೊಂಡ ಕ್ರಮಗಳಿಗೆ ಮುಂದಿನ ಸಭೆಗೆ ವರದಿಯೊಂದಿಗೆ ತಿಳಿಸಲಾಯಿತ್ತು.**
**(ಕ್ರಮ:- ಸಕಾಅ/ಸಅ/ಬಿಬಿಎಂಪಿ/ಮೇಜರ್ ರೋಡ್)**

**ರಾಜಕಾಲುವೆ ಬಗ್ಗೆ:-**

1) ಗಿರೀಶ್ ಕುಮಾರ್ ನಾಯ್ಡು ರವರು ಸರ್ವೆ.ನಂ ತಾಲ್ಲೂಕು ರಿಜಿಸ್ಟರ್ ಸಂಖ್ಯೆ. 75, 44, 51, 91, 92, 93 ಮತ್ತು 90 ರಲ್ಲಿ ರಾಜಕಾಲುವೆ ಒತ್ತುವರಿ ಮಾಡಕೊಂಡು ಅನಧಿಕೃತವಾಗಿ ಬೃಹತ್ ಕಟ್ಟಡಗಳನ್ನು ನಿರ್ಮಾಣ ಮಾಡಿಕೊಂಡಿರುತ್ತಾರೆ ಈ ಒತ್ತುವರಿಯನ್ನು ತೆರವುಗೊಳಿಸಲು ತಿಳಿಸಿದರು. ಈಗ ಅಪಾರ್ಟ್‌ಮೆಂಟ್ ಕಟ್ಟಲು ಶುರು ಮಾಡಿರುತ್ತಾರೆ.
2) ಆರೋಗ್ಯಸ್ವಾಮಿ ರವರು ಭೈರತಿ ಸರ್ಕಾರಿ ಶಾಲೆಯಿಂದ ಕೊತ್ತನೂರು ಪೋಲಿಸ್ ಠಾಣೆರವರಿಗೆ ಇರುವ ರಾಜಕಾಲುವೆಯಲ್ಲಿನ ಮಣ್ಣು ತೆರವುಗೊಳಿಸಲು ತಿಳಿಸಿದರು.

Scanned with CamScanner

3) ಗಿರೀಶ್ ಕುಮಾರ್ ರವರು ಸಾದರಮಂಗಳದಲ್ಲಿ ಸ್ಲಂ ಬೋರ್ಡ್ ಪಕ್ಕದಲ್ಲಿರುವ ಬಡಾವಣೆಯಲ್ಲಿ ರಾಜಕಾಲುವೆ ಮುಚ್ಚಿ ಲೇಔಟ್ ನಿರ್ಮಾಣ ಮಾಡಿರುತ್ತಾರೆ ತಿಳಿಸಿದರು.
4) ಪ್ರಸಾದ್ ರವರು ಹೂಡಿ ಸ್ಮಶಾನದ ಪಕ್ಕದ ರಾಜಕಾಲುವೆಯ ಹೂಳು ತೆಗೆಸಲು ತಿಳಿಸಿದರು.

**ಕ್ರಂ.ಸಂ 1ರಿಂದ 4 ರ ವರೆಗಿನ ದೂರುಗಳ ಬಗ್ಗೆ ಪರಿಶೀಲಿಸಿ ಒಂದುವಾರದೊಳಗಾಗಿ ಕೈಗೊಂಡ ಕ್ರಮಗಳಿಗೆ ಮುಂದಿನ ಸಭೆಗೆ ವರದಿಯೊಂದಿಗೆ ತಿಳಿಸಲಾಯಿತ್ತು.**
**(ಕ್ರಮ:- ಸಕಾಅ/ಸಅ/ಬಿಬಿಎಂಪಿ/ಮೇಜರ್ ರೋಡ್**

**ಪೋಲೀಸ್ ಇಲಾಖೆ**

1) ಗೀರಿಶ್ ಕುಮಾರ್ ನಾಯ್ಡು ರವರು ಅಯ್ಯಪ್ಪನಗರದ ಮುನೇಶ್ವರ ದೇವಸ್ಥಾನ ಹತ್ತಿರದ ಟ್ರಾಫಿಕ್ ಪೋಲಿಸ್‌ರನ್ನು ನಿಯೋಜಿಸಲು ತಿಳಿಸಿದರು ಮತ್ತು ನೈಟ್ ಬೀಟ್ ಹೆಚ್ಚಿಸಲು ತಿಳಿಸಿದರು.

**ಕ್ರಂ.ಸಂ 1 ರ ವರೆಗಿನ ದೂರುಗಳ ಬಗ್ಗೆ ಪರಿಶೀಲಿಸಿ ಒಂದುವಾರದೊಳಗಾಗಿ ಕೈಗೊಂಡ ಕ್ರಮಗಳಿಗೆ ಮುಂದಿನ ಸಭೆಗೆ ವರದಿಯೊಂದಿಗೆ ತಿಳಿಸಲಾಯಿತ್ತು.**
**(ಕ್ರಮ:- ಟ್ರಾಫಿಕ್/ಪೋಲೀಸ್ ಇಲಾಖೆ)**

**ಕಾಮಗಾರಿ ಇಲಾಖೆ**

1) ಕೆಂಪರಾಜು ರವರು ಮಾರಿಯಮ್ಮ ದೇವಸ್ಥಾನ ರಸ್ತೆಯನ್ನು ಅಗೆದು ನಿಲ್ಲಿಸಿರುತ್ತಾರೆ ಇದರ ಕಾಮಗಾರಿಯನ್ನು ಆದಷ್ಟು ಬೇಗ ಮಾಡಿಕೊಡಲು ತಿಳಿಸಿದರು.
2) ಬಿಳಿಶೀವಾಲೆ ಆನಂದ ರವರು ಮನೆಯ ಮುಂದೆ ಚರಂಡಿ ಮಾಡಿದ್ದು ಇದಕ್ಕೆ ಸ್ಲಾಬ್‌ಗಳು ಹಾಕಿರುವುದಿಲ್ಲ ಎಂದು ತಿಳಿಸಿದರು.
3) ಆರೋಗ್ಯಸ್ವಾಮಿ ರವರು ಎಲ್ಲಾ ಕಾಮಗಾರಿಗಳು ನಡೆಯುವ ಕಡೆ ಕಾಮಗಾರಿಯ ಮೊತ್ತವನ್ನು ಪ್ರಚುರ ಪಡಿಸಲು ತಿಳಿಸಿದರು.
4) ಗಿರೀಶ್ ಕುಮಾರ್ ನಾಯ್ಡು ರವರು 1ನೇ ಬ್ಲಾಕ್ ಮತ್ತು 4ನೇ ಕ್ರಾಸ್ ರಸ್ತೆಯನ್ನು ಹಾಕಲು ತಿಳಿಸಿದರು.
5) ಅಧ್ಯಕ್ಷರು ಮುಂದಿನ ಬಜೇಟ್‌ನ 2022–23ರ ಬಜೇಟ್ ಅನುದಾನವನ್ನು ಉಪಯೋಗಿಸಿಕೊಂಡು ಕಾಮಗಾರಿ ಮಾಡುವುದಾಗಿ ತಿಳಿಸಿದರು.
6) ಗಿರೀಶ್ ಕುಮಾರ್ ನಾಯ್ಡು ರವರು 1ನೇ ಬ್ಲಾಕ್ ಮತ್ತು 1ನೇ ಕ್ರಾಸ್‌ನಲ್ಲಿ ಕೆಲವರ ಅನುಕೂಲಕ್ಕೆ ತಕ್ಕಂತೆ ಕಾಮಗಾರಿ ಮಾಡಿರುತ್ತಾರೆ ಎಂದು ತಿಳಿಸಿದರು.
7) ಪ್ರಸಾದ್‌ರವರು ಪ್ರಶಾಂತ್ ಲೇಔಟ್ ಉಳಿದ ರಸ್ತೆಗಳ ಕಾಮಗಾರಿಗಳನ್ನು ಸರಿಪಡಿಸಲು ತಿಳಿಸಿದರು (10ನೇ ಮತ್ತು 11ನೇ ಕ್ರಾಸ್).
8) ಗಿರೀಶ್ ಕುಮಾರ್ ನಾಯ್ಡು ರವರು ಸಾದರಮಂಗಳ ಕೆರೆ ಪಕ್ಕದ ಶ್ರದ್ಧಾ ಲೇಕ್ ವ್ಯೂ ಹಾಗೂ ಅಪಾರ್ಟ್‌ಮೆಂಟ್‌ಗಳು ಬಫ್ಫರ್‌ಜೋನ್ ಬಿಡದೆ ಕಟ್ಟಿರುತ್ತಾರೆ ಇದನ್ನು ಟೌನ್‌ಪ್ಲಾನಿಂಗ್‌ಗೆ ಪತ್ರ ಬರೆಯಲು ತಿಳಿಸಿದರು.
9) ಆರೋಗ್ಯಸ್ವಾಮಿ ರವರು ಭೈರತಿ, ಗೆದ್ದಲಹಳ್ಳಿ ರಸ್ತೆಯ 6ನೇ ಕ್ರಾಸ್ ಕಾಮಗಾರಿ ಮಾಡಲು ತಿಳಿಸಿದರು.
10) ಅಧ್ಯಕ್ಷರು ಎಇ. ರವರಿಗೆ ಮುಂದಿನ ಒಂದುವಾರದಲ್ಲಿ ಕಾಮಗಾರಿ ಶುರುಮಾಡಲು ತಿಳಿಸಿದರು.
11) ಗಿರೀಶ್ ಕುಮಾರ್ ನಾಯ್ಡು ರವರು ವಾರ್ಡ್ ವ್ಯಾಪ್ತಿಯಲ್ಲಿ ಜಿ–3ಗೆ ಅನುಮತಿ ಪಡೆದು ಜಿ–9 ವರೆಗೆ ಕಟ್ಟಡಗಳನ್ನು ಕಟ್ಟಿರುತ್ತಾರೆ ಇದನ್ನು ಸರಿಪಡಿಸಲು ತಿಳಿಸಿದರು. ಇನ್ನೂ ಮುಂದೆ ನಡೆಯುವ

Scanned with CamScanner

Illigal Construction ಗಳು ನಡೆಯದಂತೆ ತಿಳಿಸಿದರು. ಆಲ್ಫಾಗಾರ್ಡನ್ ದಿಯಾಶಾಲೆ ಸರ್ಕಾರಿ ಜಾಗದಲ್ಲಿ construction ಮಾಡುತ್ತಿರುವುದನ್ನು ಸ್ಥಗಿತಗೊಳಿಸಲು ತಿಳಿಸಿದರು

**ಕ್ರಂ.ಸಂ 1ರಿಂದ 11ರ ವರೆಗಿನ ದೂರುಗಳ ಬಗ್ಗೆ ಪರಿಶೀಲಿಸಿ ಒಂದುವಾರದೊಳಗಾಗಿ ಕೈಗೊಂಡ ಕ್ರಮಗಳಿಗೆ ಮುಂದಿನ ಸಭೆಗೆ ವರದಿಯೊಂದಿಗೆ ತಿಳಿಸಲಾಯಿತ್ತು.**
**(ಕ್ರಮ:- ಸಕಾಅ/ಸಅ/ಬಿಬಿಎಂಪಿ/ಮೇಜರ್ ರೋಡ್**

**ಅರಣ್ಯ ಇಲಾಖೆ**

1) ಗಿರೀಶ್ ಕುಮಾರ್ ನಾಯ್ಡು ರವರು ಬೀದಿ ದೀಪಗಳು ಇರುವ ಕಡೆ ಅತಿಯಾಗಿ ಎತ್ತರವಾಗಿ ಮರಗಳು ಬೆಳದಿದ್ದು ಇವುಗಳನ್ನು ತೆಗೆಯಲು ತಿಳಿಸಿದರು ಮತ್ತು ಕತ್ತರಿಸಿದ ಕೊಂಬೆಗಳನ್ನು ತೆಗೆಯಲು ತಿಳಿಸಿದರು.
2) ಪ್ರಸಾದ್ ಕೊಡಿಗೇಹಳ್ಳಿ ಅನಧಿಕೃತ ಬ್ಯಾನರ್‌ಗಳನ್ನು ತೆಗೆಯಲು ತಿಳಿಸಿದರು.
3) ಗಿರೀಶ್ ಕುಮಾರ್ ನಾಯ್ಡು ರವರು ಹೂಡಿ ಬಿಬಿಎಂಪಿ ಕಛೇರಿಗೆ ಹಾಕಿದ್ದ ಅನಧಿಕೃತ ಪ್ಲೆಕ್ಸ್ ಹಾಕಿದ್ದವರ ಬಗ್ಗೆ ಕ್ರಮ ಕೈಗೊಳ್ಳಲು ತಿಳಿಸಿದರು.
4) ಅಧ್ಯಕ್ಷರು ಮುಂದಿನ ದಿನಗಳಲ್ಲಿ ಹಾಕಿದವರಿಗೆ ದಂಡಹಾಕಲು ತಿಳಿಸಿದರು.
5) ಗಿರೀಶ್ ಕುಮಾರ್ ನಾಯ್ಡು ರವರು ಹೂಡಿ ವಾರ್ಡ್ ಸ್ಪೋಟ್ಸ್‌ಕ್ಲಬ್ ವತಿಯಿಂದ ಯಾರಾದರು ಸ್ಪೋಟ್ಸ್ ಮೇನ್‌ಗಳಿದ್ದರೆ ಅವರಿಗೆ ಅವಕಾಶ ಕಲ್ಪಿಸಬೇಕೆಂದು ತಿಳಿಸಿದರು.

**ಕ್ರಂ.ಸಂ 1 ಮತ್ತು 5 ರ ವರೆಗಿನ ದೂರುಗಳ ಬಗ್ಗೆ ಪರಿಶೀಲಿಸಿ ಒಂದುವಾರದೊಳಗಾಗಿ ಕೈಗೊಂಡ ಕ್ರಮಗಳಿಗೆ ಮುಂದಿನ ಸಭೆಗೆ ವರದಿಯೊಂದಿಗೆ ತಿಳಿಸಲಾಯಿತ್ತು.**
**(ಕ್ರಮ:- ಅರಣ್ಯ ಇಲಾಖೆ/ಬಿಬಿಎಂಪಿ)**

**Animal Husbandry:-**

1) ಅರುಣಾರೆಡ್ಡಿ ರವರು ಹೂಡಿ ವಾರ್ಡ್ ವ್ಯಾಪ್ತಿಯಲ್ಲಿ ಬೆಳತ್ತೂರು ಎಚ್‌ಡಿಎಫ್‌ಸಿ ರಸ್ತೆಯಲ್ಲಿ ಅತಿಯಾದ ಹಂದಿಗಳು ಇರುತ್ತವೆ ಇವುಗಳನ್ನು ಇಡಿಯಲು ತಿಳಿಸಿದರು.
2) ಅಧ್ಯಕ್ಷರು ವಾರ್ಡ್ ವ್ಯಾಪ್ತಿಯಲ್ಲಿ ಇರುವ ಹಂದಿಗಳನ್ನು ಎಡಿಎಎಚ್ ರವರು ಇವುಗಳನ್ನು ಹಿಡಿದು ಇವುಗಳ ಕಾಟವನ್ನು ತಪ್ಪಿಸಬೇಕೆಂದು ತಿಳಿಸಿದರು.

**ಕ್ರಂ.ಸಂ 1 ಮತ್ತು 2ರ ವರೆಗಿನ ದೂರುಗಳ ಬಗ್ಗೆ ಪರಿಶೀಲಿಸಿ ಒಂದುವಾರದೊಳಗಾಗಿ ಕೈಗೊಂಡ ಕ್ರಮಗಳಿಗೆ ಮುಂದಿನ ಸಭೆಗೆ ವರದಿಯೊಂದಿಗೆ ತಿಳಿಸಲಾಯಿತ್ತು.**
**(ಕ್ರಮ:-Animal Husbandry/ಬಿಬಿಎಂಪಿ)**

**ಆರೋಗ್ಯ ಇಲಾಖೆ**

1) ಗೀರಿಶ್ ಕುಮಾರ್ ನಾಯ್ಡು ರವರು ಹೂಡಿ ವಾರ್ಡ್ ವ್ಯಾಪ್ತಿಯಲ್ಲಿ ಖಾಸಗಿ ಬಿಲ್ಡಿಂಗ್ ಬಾಡಿಗೆ ಪಡೆದು ಪಿಎಚ್‌ಸಿ ನಡೆಸುತ್ತಿರುತ್ತಾರೆ ಆದರೆ Doctor ಹಾಗೂ Nurses ವ್ಯವಸ್ಥೆ ಸರಿಯಾಗಿರುವುದಿಲ್ಲ ಎಂದು ತಿಳಿಸಿದರು
2) ಅಯ್ಯಪ್ಪನಗರ ಸುತ್ತಮುತ್ತ ವಾಟರ್ ಪ್ಯೂರಿಫೈರ್‌ನ್ನು ಹೊಸದಾಗಿ ನಿರ್ಮಿಸಲು ತಿಳಿಸಿದರು.

**ಕ್ರಂ.ಸಂ 1ರಿಂದ 2 ರ ವರೆಗಿನ ದೂರುಗಳ ಬಗ್ಗೆ ಪರಿಶೀಲಿಸಿ ಒಂದುವಾರದೊಳಗಾಗಿ ಕೈಗೊಂಡ ಕ್ರಮಗಳಿಗೆ ಮುಂದಿನ ಸಭೆಗೆ ವರದಿಯೊಂದಿಗೆ ತಿಳಿಸಲಾಯಿತ್ತು.**
**(ಕ್ರಮ:- ಸಕಾಅ/ಸಅ/ಬಿಬಿಎಂಪಿ/ಆರೋಗ್ಯ ಇಲಾಖೆ)**

Scanned with CamScanner

**ಕೋವಿಡ್-19 ಸಾಂಕ್ರಾಮಿಕ ರೋಗದ ಬಗ್ಗೆ:-**

ಮುಂಜಾಗ್ರತಾ ಕ್ರಮವಾಗಿ ಸಭೆ ಸಮಾರಂಬ ಮಾಡದಂತೆ ತಿಳಿಸಲಾಯಿತ್ತು ಹಾಗೂ ವ್ಯಾಕ್ಸಿನ್‌ನೇಶನ್ ಹಾಕಿಸಲು ಸ್ಥಳಿಯರಿಗೆ ಮುಂಜಾಗ್ರತೆ ವಹಿಸಿ ಕ್ರಮಕೈಗೊಳ್ಳಲು ತಿಳಿಸಿದರು.

Covid-19, ವ್ಯಾಕ್ಸಿನೇಷನ್, Contact Tracing ಮತ್ತು Testing ಮಾಡುವ ಬಗ್ಗೆ ಸಭೆಯಲ್ಲಿ ಚರ್ಚಿಸಲಾಯಿತು.

ಸಭೆಗೆ ಹಾಜರಾಗದ ಅಧಿಕಾರಿಗಳಿಗೆ ಮುಂದಿನ ಸಭೆಗಳಿಗೆ ತಪ್ಪದೇ ಹಾಜರಾಗಲು ಸೂಚಿಸಲಾಯಿತು. ಸಮಿತಿ ಸಭೆಗೆ ಆಗಮಿಸಿದ ಎಲ್ಲಾ ಅಧಿಕಾರಿಗಳಿಗೂ ಹಾಗೂ ಸಂಘ ಸಂಸ್ಥೆಯ ಸದಸ್ಯರಿಗೂ ನೋಡಲ್ ಅಧಿಕಾರಿಗಳಿಗೂ ವಂದಿಸಿ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

21/05/2022

ವಾರ್ಡ್ ಸಮಿತಿ ನೋಡಲ್ ಅಧಿಕಾರಿ ಹಾಗೂ
ಸ.ಕಾ.ಅ. ಹೂಡಿ ಉಪವಿಭಾಗ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಮಹದೇವಪುರ ವಲಯ

ವಾರ್ಡ್ ಸಮಿತಿ ಕಾರ್ಯದರ್ಶಿ
ಸಹಾಯಕ ಅಭಿಯಂತರರು
ವಾರ್ಡ್ ಸಂಖ್ಯೆ-54 ಹೂಡಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಮಹದೇವಪುರ ವಲಯ

Scanned with CamScanner